**ಕರ್ನಾಟಕ ಸರ್ಕಾರ**

ಸಂಖ್ಯೆ: ಆಇ 02 ಟಿಸಿಇ 2018

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:31.12.2018

**ಸುತ್ತೋಲೆ**

**ವಿಷಯ:-** ಎ.ಸಿ. ಬಿಲ್ಲುಗಳ ಮೇಲೆ ಸೆಳೆಯಲಾದ ಮೊತ್ತಗಳಿಗೆ ಎನ್.ಡಿ.ಸಿ. ಬಿಲ್ಲುಗಳನ್ನು ಮಹಾಲೇಖಪಾಲರಿಗೆ ಸಲ್ಲಿಸದೆ ಇರುವ ಬಗ್ಗೆ.

*********

ಸಾದಿಲ್ವಾರು ವೆಚ್ಚ ಕೈಪಿಡಿ ನಿಯಮ 36 ರ ಅನ್ವಯ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೇಲೆ ಸೆಳೆಯಲಾದ ಮೊತ್ತಗಳಿಗೆ ಸವಿವರ ಸಾದಿಲ್ವಾರು(ಎನ್.ಡಿ.ಸಿ) ಬಿಲ್ಲುಗಳನ್ನು ಒಂದು ತಿಂಗಳೊಳಗಾಗಿ ಸಲ್ಲಿಸುವಂತೆ ಹೇಳಲಾಗಿದೆ. ಈ ನಿಯಮದಡಿ ಟಿಪ್ಪಣಿಯಲ್ಲಿ ಸವಿವರ ಸಾದಿಲ್ವಾರು ಬಿಲ್ಲುಗಳನ್ನು ಮಹಾಲೇಖಪಾಲರಿಗೆ ಕಳುಹಿಸದಿದ್ದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಲಾದ ಬಳಿಕ ಆ ಅಧಿಕಾರಿಗಳ ವೇತನದ ಚೆಕ್ಕುಗಳನ್ನು ಮಹಾಲೇಖಪಾಲರಿಂದ ತಡೆಹಿಡಿಯಲಾಗುವುದು ಎಂದು ಹೇಳಲಾಗಿದೆ.

2. ಸರ್ಕಾರದ ಆದೇಶ ಸಂ:ಎಫ್.ಡಿ. 02 ಟಿ.ಎಫ್.ಸಿ. 2004, ದಿ:09.09.2004 ರ ಆದೇಶದಲ್ಲಿ ಎನ್.ಡಿ.ಸಿ. ಬಿಲ್ಲುಗಳನ್ನು ಸಲ್ಲಿಸುವ ಬಗ್ಗೆ ವಿವರವಾದ ಸೂಚನೆಗಳನ್ನು ನೀಡಿದೆ. ಸರ್ಕಾರದ ಆದೇಶ ಸಂ:ಎಫ್.ಡಿ 28 ಟಿಸಿಇ 2006, ದಿ:17.05.2006ರ ಆದೇಶದಲ್ಲಿ ಖಜಾನೆಗಳು ಮಾಸಿಕ ಲೆಕ್ಕಗಳನ್ನು ಮಹಾಲೇಖಪಾಲರಿಗೆ ಸಲ್ಲಿಸುವ ಸಮಯದಲ್ಲಿ ಡಿಡಿಓ ಗಳು ಸಲ್ಲಿಸಲಾದ ಎನ್.ಡಿ.ಸಿ. ಬಿಲ್ಲುಗಳನ್ನು ಮಹಾಲೇಖಪಾಲರಿಗೆ ಕಳುಹಿಸಬೇಕೆಂದು ಆದೇಶಿಸಲಾಗಿದೆ. ಆದಾಗ್ಯೂ, ಸರ್ಕಾರದ ಸೂಚನೆಗಳನ್ನು ಪಾಲಿಸದೆ ಕಳೆದ 5 ವರ್ಷಗಳಿಂದ ಬಟವಾಡೆ ಅಧಿಕಾರಿಗಳು ಸವಿವರ ಸಾದಿಲ್ವಾರು ಬಿಲ್ಲುಗಳನ್ನು(ಎನ್.ಡಿ.ಸಿ) ಸಲ್ಲಿಸದೆ ಇರುವುದರಿಂದ ರೂ.101.92 ಕೋಟಿಗಳು ಇತ್ಯರ್ಥವಾಗದೆ ಬಾಕಿ ಉಳಿಸಿಕೊಂಡಿರುವುದಾಗಿ ಮಹಾಲೇಖಪಾಲರು ತಮ್ಮ ದಿ:17/10/2018ರ ಅರೆ ಸರ್ಕಾರಿ ಪತ್ರದಲ್ಲಿ ತಿಳಿಸಿರುತ್ತಾರೆ.

3. ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೇಲೆ ಸೆಳೆದ ಮೊತ್ತವನ್ನು ಆಯಾ ಪ್ರಧಾನ ಲೆಕ್ಕ ಶೀರ್ಷಿಕೆಯಡಿಯಲ್ಲಿ ಸಂಚಿತ ನಿಧಿಗೆ ಖರ್ಚು ಹಾಕಬೇಕಾಗಿದ್ದು, ನಿಗದಿತ ಸಮಯದೊಳಗೆ ಈ ಲೆಕ್ಕವನ್ನು ಇತ್ಯರ್ಥ ಮಾಡದಿದ್ದಲ್ಲಿ ವೆಚ್ಚವನ್ನು ಅಧಿಕವಾಗಿ ತೋರಿಸಿದಂತಾಗುವುದರಿಂದ ಇದು ಸರ್ಕಾರದ ವಿತ್ತೀಯ ಸೂಚಕಗಳ ಮೇಲೆ ಪ್ರಭಾವ ಬೀರುತ್ತವೆ. ಎನ್.ಡಿ.ಸಿ. ಬಿಲ್ಲುಗಳನ್ನು ಸಲ್ಲಿಸದೆ ಇರುವ ಡಿಡಿಓ ಗಳ ಬಗ್ಗೆ ಮಹಾಲೇಖಪಾಲರ ಸಿ.ಎ.ಜಿ ವರದಿಯಲ್ಲಿ ಆಕ್ಷೇಪಣೆಯು ವ್ಯಕ್ತವಾಗಿರುತ್ತದೆ. ಹಾಗೂ ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ತನ್ನ

ಐದನೆಯ ವರದಿಯಲ್ಲಿ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಸವಿವರ ಸಾದಿಲ್ವಾರು ಬಿಲ್ಲುಗಳನ್ನು(ಎನ್.ಡಿ.ಸಿ) ಸಲ್ಲಿಸದೆ ಇರುವ ಬಟವಾಡೆ ಅಧಿಕಾರಿಗಳ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಬೇಕೆಂದು ಶಿಫಾರಸು ಮಾಡಿದೆ. ಡಿಡಿಓ ಗಳು ನಿಗದಿತ ಅವಧಿಯಲ್ಲಿ ಎನ್.ಡಿ.ಸಿ. ಬಿಲ್ಲುಗಳನ್ನು ಸಲ್ಲಿಸಲು ವಿಫಲವಾದಲ್ಲಿ ಅಂತಹ ಡಿಡಿಓ ಗಳ ವೇತನ ಬಿಲ್ಲುಗಳು/ವೇತನೇತರ ಬಿಲ್ಲುಗಳನ್ನು ಖಜಾನೆ-2ರ ತಂತ್ರಾಂಶದಲ್ಲಿ ತಡೆ ಹಿಡಿಯಲು ಕ್ರಮ ಕೈಗೊಳ್ಳುವಂತೆ ಖಜಾನೆಗೆ ಸೂಚಿಸಿದೆ. ಆದರೆ ಸಂದರ್ಭಾನುಸಾರ ಪ್ರಕರಣಗಳ ತುರ್ತು ಆದ್ಯತೆಯನ್ನಾಧರಿಸಿ ಈ ಕ್ರಮವನ್ನು ಸಡಿಲಗೊಳಿಸುವ ಬಗ್ಗೆ ಪ್ರಧಾನ ಕಾರ್ಯದರ್ಶಿಗಳು, ಖಜಾನೆ-2 ರವರು ತಮ್ಮ ಹಂತದಲ್ಲಿ ಕ್ರಮತೆಗೆದುಕೊಳ್ಳಬಹುದು.

4. ಆದ್ದರಿಂದ ಬಾಕಿಯಿರುವ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೇಲೆ ಸೆಳೆಯಲಾದ ಮೊತ್ತಗಳಿಗೆ ಬಟವಾಡೆ ಅಧಿಕಾರಿಗಳು ಸವಿವರ ಸಾದಿಲ್ವಾರು ಬಿಲ್ಲುಗಳನ್ನು ಸಲ್ಲಿಸಲು ಕೆಳಕಂಡ ಸೂಚನೆಗಳನ್ನು ತಮ್ಮ ಅಧೀನದ ನಿಯಂತ್ರಣಾಧಿಕಾರಿಗಳಿಗೆ ನೀಡಲು ಕ್ರಮವಹಿಸಲು ತಿಳಿಸಿದೆ.

1. ನಿಯಂತ್ರಣಾಧಿಕಾರಿಗಳು/ಇಲಾಖಾ ಮುಖ್ಯಸ್ಥರು ತನ್ನ ಅಧೀನಕ್ಕೊಳಪಡುವ ಬಟವಾಡೆ ಅಧಿಕಾರಿಗಳು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೇಲೆ ಸೆಳೆಯಲಾದ ಮೊತ್ತಗಳಿಗೆ ನಿಗದಿತ ಅವಧಿಯಲ್ಲಿ ಎನ್.ಡಿ.ಸಿ. ಬಿಲ್ಲುಗಳನ್ನು ಸಲ್ಲಿಸಿರುವ ಬಗ್ಗೆ ಮಾಸಿಕ ವರದಿಯನ್ನು ಕಡ್ಡಾಯವಾಗಿ ಪಡೆದುಕೊಂಡು ಸೂಕ್ತ ಕ್ರಮ ಕೈಗೊಳ್ಳುವುದು.
2. ವರ್ಗಾವಣೆಗೊಂಡ ಡಿಡಿಓಗಳು ಪ್ರಭಾರ ಹಸ್ತಾಂತರಿಸುವಾಗ ಸಿ.ಟಿ.ಸಿ. ಯೊಂದಿಗೆ ಖಜಾನೆ-2ರ ತಂತ್ರಾಂಶದ ಮೂಲಕ ಪಡೆದುಕೊಂಡ ಎ.ಸಿ. ಬಿಲ್ಲಿನ ಬೇಬಾಕಿ ಪ್ರಮಾಣ ಪತ್ರ (No due certificate) ಕಡ್ಡಾಯವಾಗಿ ಲಗತ್ತಿಸುವುದು.

(ಅನಿಲ್ ಕುಮಾರ್ ಝಾ)
ಸರ್ಕಾರದ ಪ್ರಧಾನ ಕಾರ್ಯದರ್ಶಿ (ಆ ಮತ್ತು ಸಂ)
ಆರ್ಥಿಕ ಇಲಾಖೆ.

ಇವರಿಗೆ:

1. ಪ್ರಧಾನ ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು, ಕರ್ನಾಟಕ, ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5326/5369. ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು(ಲೆಕ್ಕ ತನಿಖೆ-1), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.

3. ಪ್ರಧಾನ ಮಹಾಲೇಖಪಾಲರು(ಲೆಕ್ಕ ತನಿಖೆ-2), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು /ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಖಜಾನೆ-2), ಮತ್ತು ಪದನಿಮಿತ್ತ ಖಜಾನೆ ಆಯುಕ್ತರು, ಆರ್ಥಿಕ ಇಲಾಖೆ ವಾಣಿಜ್ಯ ತೆರಿಗೆ ಕಟ್ಟಡ, ಗಾಂಧಿ ನಗರ ಬೆಂಗಳೂರು-9.
6. ಎಲ್ಲಾ ಇಲಾಖಾ ಮುಖ್ಯಸ್ಥರುಗಳು-ತಮ್ಮ ಅಧೀನದ ಎಲ್ಲಾ ಹಣ ಸೆಳೆಯುವ ಅಧಿಕಾರಿಗಳಿಗೆ ಸೂಚನೆ ನೀಡುವುದು.
7. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
8. ಎಲ್ಲಾ ಜಿಲ್ಲಾ ಖಜಾನೆ ಅಧಿಕಾರಿಗಳು.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪತ್ರಿಗಳು.